ಅಧ್ಯಕ್ಷರು: ಪ್ರಶ್ನೋತ್ತರ ವೇಳೆ ಮುಗಿಯಿತು.

ಶ್ರೀ ಕೆ.ಹೆಚ್.ಹನುಮೇಗೌಡ: ಮಾನ್ಯ ಅಧ್ಯಕ್ಷರೆ, ಒಂದೇ ಒಂದು ಕ್ಲಾರಿಫಿಕೇಶನ್. ಇದೇ ವಿಚಾರದಲ್ಲಿ ದಯವಿಟ್ಟು ಅವಕಾಶ ಕೊಡಿ.

ಅಧ್ಯಕ್ಷರು: ಇಲ್ಲ, ಒಂದಕ್ಕೊಂದು ಬೆಳೆದುಕೊಂಡು ಹೋಗುತ್ತದೆ. ನೀವು ಅವರ ಗಮನಕ್ಕೆ ತನ್ನಿ.

ಶ್ರೀ ಕೆ.ಹೆಚ್.ಹನುಮೇಗೌಡ: ದಯವಿಟ್ಟು ಅವಕಾಶ ಕೊಡಿ. ನಮಗೆ ತೊಂದರೆಯಾಗುತ್ತಿದೆ.

ಅಧ್ಯಕ್ಷರು: ಮುಖ್ಯಮಂತ್ರಿಗಳು ನನ್ನ ಗಮನಕ್ಕೆ ತನ್ನಿಯೆಂದು ಹೇಳಿದ ಮೇಲೆ ನೀವು ಏಕೆ ಮತ್ತೆ ಕೇಳುತ್ತೀರಿ? ವೆರಿ ಸಾರಿ ಮಿಸ್ಟರ್ ಹನುಮೇಗೌಡರೆ, ಗಮನಕ್ಕೆ ತನ್ನಿ ನಾನು ಗಂಭೀರವಾದ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿದ್ದಾರೆ.

(ಗೊಂದಲ)

ಅಧ್ಯಕ್ಷರು: ನನಗೆ ಕಳಿಸಿಕೊಡಿ ಎಂದು ಹೇಳಿದ್ದಾರೆ. ಪುನಃ ಇನ್ನೊಂದು ಸಲ ಕಳಿಸಿಕೊಡಿ.

(ಅ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ಶ್ರೀ ಡಿ.ಬಿ.ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿ): ಮಾನ್ಯ ಅಧ್ಯಕ್ಷರೆ, 15ನೇ ಪಟ್ಟಿಯಲ್ಲಿರುವ ಲಿಖಿತ ಮೂಲಕ ಉತ್ತರಿಸುವ 109 ಪ್ರಶ್ನೆಗಳ ಪೈಕಿ 9 ಪ್ರಶ್ನೆಗಳಿಗೆ ಸಂಬಂಧಪಟ್ಟ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು: ಮಂಡಿಸಲಾಯಿತು.

ಉತ್ತರಹಳ್ಳಿ ಕ್ಷೇತ್ರದಲ್ಲಿ ಕೈಗೊಂಡಿರುವ ವಿವಿಧ ಕಾಮಗಾರಿಗಳು

1657 (2318) ಶ್ರೀ ಆಶೋಕ್ ಆರ್ (ಉತ್ತರಹಳ್ಳಿ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:-

ಅ) ಕಳೆದ 2 ವರ್ಷಗಳಲ್ಲಿ ನಬಾರ್ಡ್ ಆರ್ಥಿಕ ನೆರವಿನಲ್ಲಿ ಉತ್ತರಹಳ್ಳಿ ಕ್ಷೇತ್ರದಲ್ಲಿ ಕೈಗೊಂಡಿರುವ ರಸ್ತೆ, ಒಳಚರಂಡಿ ಮತ್ತು ಇತರೆ ಕಾಮಗಾರಿ ಕೆಲಸಗಳೆಷ್ಟು:

ಆ) ಆ ಪೈಕಿ ಪ್ರಸ್ತುತ ಸಾಲಿನಲ್ಲಿ ಯಾವ ಯಾವ ಕಾಮಗಾರಿ ಕೆಲಸಗಳನ್ನು ಪ್ರಾರಂಭಿಸಲಾಗಿದೆ;

ಇ) ಇದರಲ್ಲಿ ಇದುವರೆವಿಗೂ ಪೂರ್ಣವಾಗಿರುವ ಕಾಮಗಾರಿ ಕೆಲಸಗಳೆಷ್ಟು; ಅವು ಯಾವುವು? (ಮಾಹಿತಿ ಒದಗಿಸುವುದು)

ಶ್ರೀ ಧರ್ಮ ಸಿಂಗ್ (ಲೋಕೋಪಯೋಗಿ ಸಚಿವರು).

ಅ) ಕಳೆದ ಎರಡು ವರ್ಷಗಳಲ್ಲಿ ಉತ್ತರಹಳ್ಳಿ ಕ್ಷೇತ್ರದಲ್ಲಿ ಕೈಗೊಂಡಿರುವ ಕಾಮಗಾರಿಗಳು ಈ ಕೆಳಕಂಡಂತೆ ಇದೆ.

1. ಕೆಂಗೇರಿ ಉತ್ತರಹಳ್ಳಿ ರಸ್ತೆ 1ನೇ ಕಿ.ಮೀ ನಲ್ಲಿ ವೃಷಭಾವತಿ ನದಿಗೆ ಸೇತುವೆ ನಿರ್ಮಾಣ 57.48ಲಕ್ಷ.

2. ಕುಂಬಳಗೋಡು ಕನಕಪುರ ರಸ್ತೆಯ 0.75 ಕಿ.ಮೀ.ನಲ್ಲಿ ವೃಷಭಾವತಿ ನದಿಗೆ ಸೇತುವೆ ನಿರ್ಮಾಣ - 39.20 ಲಕ್ಷ.

ಅ) ಮೇಲಿನ ಎರಡು ಕಾಮಗಾರಿಗಳನ್ನು 97-98ರಲ್ಲಿಯೇ ಪ್ರಾರಂಭಿಸಲಾಗಿದೆ.

ಇ) ಕುಂಬಳಗೋಡು ಕನಕಪುರ ರಸ್ತೆಯ 0.75 ಕಿ.ಮೀ.ನಲ್ಲಿ ವೃಷಭಾವತಿ ನದಿಗೆ ಸೇತುವೆ ನಿರ್ಮಾಣ ಕಾಮಗಾರಿ ಪೂರ್ಣಗೊಂಡಿದೆ.

ರಾಜ್ಯದ ಹೆದ್ದಾರಿಗಳನ್ನು, ರಾಷ್ಟ್ರೀಯ ಹೆದ್ದಾರಿಗಳನ್ನಾಗಿ ಪರಿವರ್ತಿಸುವುದು

1658 (2428) ಶ್ರೀ ಆತ್ಮಾನಂದ ಎಂ.ಎಸ್.(ಮಂಡ್ಯ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿರುವ ರಾಜ್ಯ ಹೆದ್ದಾರಿಗಳನ್ನು ರಾಷ್ಟ್ರೀಯ ಹೆದ್ದಾರಿಗಳನ್ನಾಗಿ ಪರಿವರ್ತಿಸುವ ಆಲೋಚನೆ ಸರ್ಕಾರಕ್ಕೆ ಇದೆಯೇ;

ಆ) ಹಾಗಿದ್ದಲ್ಲಿ ಯಾವ ಯಾವ ಹೆದ್ದಾರಿಗಳನ್ನು ರಾಷ್ಟ್ರೀಯ ಹೆದ್ದಾರಿಗಳನ್ನಾಗಿ ಪರಿವರ್ತಿಸಲು ಸರ್ಕಾರ ಉದ್ದೇಶಿಸಿದೆ?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು).

ಅ) ರಾಜ್ಯದಲ್ಲಿರುವ ಕೆಲವು ರಾಜ್ಯ ಹೆದ್ದಾರಿಗಳನ್ನು ರಾಷ್ಟ್ರೀಯ ಹೆದ್ದಾರಿಗಳನ್ನಾಗಿ ಪರಿವರ್ತಿಸುವ ಆಲೋಚನೆ ಸರ್ಕಾರಕ್ಕೆ ಇದೆ.

ಆ) ಕೆಳಕಂಡ ರಾಜ್ಯ ಹೆದ್ದಾರಿಗಳನ್ನು ರಾಷ್ಟ್ರೀಯ ಹೆದ್ದಾರಿಗಳನ್ನಾಗಿ ಪರಿವರ್ತಿಸಲು ಸರ್ಕಾರ ಉದ್ದೇಶಿಸಿದೆ:

1) ಬೀದರ್-ಶ್ರೀರಂಗಪಟ್ಟಣ.

2) ಜೇವರ್ಗಿ-ಸಂಕೇಶ್ವರ.

3) ಬಿಜಾಪುರ-ಹುಬ್ಬಳ್ಳಿ.

4) ಕಲ್ಮಲಾ (ರಾಯಚೂರು)-ಗಿಣಿಗೇರಾ (ಕೊಪ್ಪಳ).

ಮಂಡ್ಯ ಕೈಗಾರಿಕಾ ತರಬೇತಿ ಕೇಂದ್ರಕ್ಕೆ ಕಟ್ಟಡ ಕಟ್ಟಲು ಸೌಲಭ್ಯ ಒದಗಿಸುವುದು.

1659 (2129) ಶ್ರೀ. ಆತ್ಮಾನಂದ ಎಂ.ಎಸ್.(ಮಂಡ್ಯ): ಮಾನ್ಯ ಕಾರ್ಮಿಕ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

ಅ) ಮಂಡ್ಯ ನಗರದಲ್ಲಿರುವ ಕೈಗಾರಿಕಾ ತರಬೇತಿ ಕೇಂದ್ರಕ್ಕೆ ಸೂಕ್ತ ಕಟ್ಟಡ ಇಲ್ಲದಿರುವುದನ್ನು ಸರ್ಕಾರವು ಗಮನಿಸಿದೆಯೇ;